**<u>ಮೇಃ ಪ್ರಧಾನ  ದಿವಾಣಿ ನ್ಯಾಯಾಧೀಶರು ಹಾಗೂ  ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No.809/2012
CW13/PW10

| | |
|---|---|
| ಹೆಸರು | ಡಾಃ ಗೀರಿಜಾ ಹೋಸೂರ |
| ತಂದೆಯ ಹೆಸರು | ವಿರೇಂದ್ರ |
| ವಯಸ್ಸು | 51 ವರ್ಷ |
| ಉದ್ಯೋಗ | ವೈದ್ಯರು |
| ವಾಸಸ್ಥಳ | ಮುದೋಳ,  ತಾಃ ಮುದೋಳ |

**ದಿನಾಂಕಃ 18-12-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.</u>**

ನಮಗೆ ಸೇರಿದ ಒಂದು ಮನೆ ಮುಧೋಳದ ಹೌಸಿಂಗ ಕ್ವಾಲನಿಯಲ್ಲಿ ಇರುತ್ತದೆ. ಸದರಿ ಮನೆ 2010 ನೇ ಸಾಲಿನಲ್ಲಿ ಚಾಸಾ-1 ರವರಿಗೆ ಬಾಡಿಗೆಯ ಮೇಲೆ ನಾವು ಕೊಟ್ಟಿದ್ದೇವು. ದಿನಾಂಕ 12.06.2012 ರಂದು ನಮ್ಮ ಬಾಡಿಗೆಯ ಮನೆಯಲ್ಲಿ ಪ್ಲಂಬಿಂಗ್ ಕೆಲಸ ಇರುತ್ತದೆ ಎಂದು ನಾವು ಚಾಸಾ-9 ರವರನ್ನು ಸದರಿ ಕೆಲಸಕ್ಕೆ ಬಾಡಿಗೆಯ ಮನೆಗೆ ಕಳುಹಿಸಿಕೊಟ್ಟಿದ್ದೇವು. ನಂತರ ಚಾಸಾ-9 ರವರು ನಮ್ಮಬಾಡಿಗೆಯ ಮನೆಗೆ ಹೋಗಿ ಮುಂದಿನ ಬಾಗಿಲು ಕೀಲಿ ಹಾಕಿದ್ದರಿಂದ ಸದರಿ ಮನೆಯ ಹಿಂದಿನ ಬಾಜು ಪ್ಲಂಬಿಂಗ್ ಕೆಲಸ ಇರುವುದರಿಂದ ಅವರು ಹಿಂದೆ ಹೋಗಿ ನೋಡಿದಾಗ ಸದರಿ ಮನೆಯ ಹಿಂದಿನ ಬಾಗಿಲು ತೆರೆದಿರುವುದು ಕಂಡುಬಂದಿತು. ನಂತರ ಚಾಸಾ-9 ರವರು ಸದರಿ ವಿಷಯವನ್ನು ಚಾಸಾ-1 ರವರಿಗೆ ಪೋನ ಮುಖಾಂತರ ತಿಳಿಸಿರುತ್ತಾರೆ. ನಂತರ ನಮ್ಮ ಬಾಡಿಗೆ ಮನೆಯಲ್ಲಿ ಇರುತ್ತಿದ್ದ ಚಾಸಾ-1 ರವರ ಮನೆಯ ಲಾಕರನ್ನು ಮುರಿದು ಸುಮಾರು 17.5 ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ತಿಳಿದುಬಂದಿತು. ನಂತರ ಈ ಕುರಿತು ಚಾಸಾ-1 ರವರು ಪಿರ್ಯಾದಿಯನ್ನು ನೀಡಿರುತ್ತಾರೆ.

***(ಈ ಹಂತದಲ್ಲಿ ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ  ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟೀ ಸವಾಲು- ಎ.ಪಿ.ಪಿ ರವರಿಂದ.</u>**

ದಿನಾಂಕ 21.06.2012 ರಂದು ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿದ ಆರೋಪಿತರು ಸಿಕ್ಕಿರುತ್ತಾರೆ ಅಂತಾ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಪೋಲಿಸ ಠಾಣೆಯಲ್ಲಿ ಇದ್ದ 05 ಜನ ಆರೋಪಿತರನ್ನು ತೋರಿಸಿ ಇವರೆ ಚಾಸಾ-1 ರವರ ಮನೆಯಲ್ಲಿರುವ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೇ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಮರು ಹೇಳಿಕೆಯನ್ನು ಈಗ ನಿಪಿ-23 ಎಂದು ಗುರುತಿಸಲಾಯಿತು. ನಿಪಿ-23 ರಲ್ಲಿ ಬರೆದಿರುವ ಸಂಗತಿಗಳ

ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ನಂ.1 ಮತ್ತು 4 ರವರ ಪರ ಶ್ರೀ ಎಸ್.ಐ.ಜೆ ವಕೀಲರಿಂದಃ**

ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದಾಗ ನಾನು ನಮ್ಮ ದವಾಖಾನೆಯಲ್ಲಿ ಇದ್ದೆ. ಚಾಸಾ-1 ರವರ ಬಾಡಿಗೆ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ನಂ.3 ಮತ್ತು 5 ರವರ ಪರ ಶ್ರೀ ಟಿ.ಆರ್.ಐ ಮತ್ತು ಎಚ್.ಕೆ.ಬಿ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ